# 2ನೇ ತರಗತಿ , ಕನ್ನಡ – 8ನೇ ಮೈಲಿಗಲ್ಲು

## 8. ಒತ್ತಕ್ಷರ ಗುರುತಿಸಿ ಬರೆ 91



ಸೂಚನೆ:
"ಣ" ಅಕ್ಷರದ ಒತ್ತಕ್ಷರವು ಮೂಲಾಕ್ಷರದಂತೆಯೇ ಇರುತ್ತದೆ ಎಂದು ಹೇಳಿಕೊಡುವುದು.
-ಅಕ್ಷರದ ತಳಭಾಗದ ಬಲಬದಿಯಲ್ಲಿ ಮೂಲಾಕ್ಷರಕ್ಕಿಂತ ಚಿಕ್ಕ ಅಳತೆಯಲ್ಲಿ ಬರೆಯಬೇಕೆಂದು ಹೇಳಿಕೊಡುತ್ತಾ ಬರೆಯುವುದನ್ನು ಅಭ್ಯಾಸ ಮಾಡಿಸುವುದು.

ಸುಣ್ಣ, ಬಣ್ಣ, ಹಣ್ಣು, ಮಣ್ಣು, ಬೆಣ್ಣೆ, ಎಣ್ಣೆ, ಚಿಣ್ಣರು, ಹರಳೆಣ್ಣೆ.

## 8. ಚಿತ್ರಪದ ಮತ್ತು ಸಾಧನ ಪದಗಳು 92

ಕಣ್ಣು
ಬಣ್ಣದ ಬುಗುರಿ
ಮಾವಿನಹಣ್ಣು
ಚಿಣ್ಣಿದಾಂಡು
ಅಣ್ಣ
ಬಣ್ಣ
ಸಣ್ಣ
ಮಣ್ಣು
ಗಿಣ್ಣು
ದೊಣ್ಣೆ
ಬೆಣ್ಣೆ
ಎಣ್ಣೆ

ಹೆಣ್ಣು
ಕೃಷ್ಣ
ಹಣ್ಣು
ಉಷ್ಣ
ಚಿಣ್ಣರು
ಹುಣ್ಣಿಮೆ
ಹೆಣ್ಣಾನೆ
ತಣ್ಣೀರು
ಕಣ್ಣಂಚು
ಕೆಂಗಣ್ಣು
ತಣ್ಣನೆಗಾಳಿ
ಬಣ್ಣದ ಗೊಂಬೆ

ಉಣ್ಣೆಬಟ್ಟೆ
ಸುಣ್ಣದಗೋಡೆ
ಅಣ್ಣಂದಿರು
ಚಿಣ್ಣಿದಾಂಡು
ಬಣ್ಣದಗರಿ
ಹಣ್ಣಿನಮರ
ಹರಳೆಣ್ಣೆ

## 8. ಅಭ್ಯಾಸ ಪುಸ್ತಕ (ವೃತ್ತದಲ್ಲಿರುವ ಒತ್ತಕ್ಷರವನ್ನು ಬಳಸಿ ಪದ ರಚಿಸಿ) 93

ಸೂಚನೆ: ಅಭ್ಯಾಸ ಪುಸ್ತಕದಲ್ಲಿ ಮೆಟ್ಟಿಲು ಸಂಖ್ಯೆ 93ನ್ನು ಪೂರ್ಣಗೊಳಿಸುವುದು.

## 8. ಚಿತ್ರ ಸಹಿತ ವಾಕ್ಯ 94

| | | |
|---|---|---|
|  | ಅಜ್ಜಿಗೆ ಕಜ್ಜಾಯದ ಆಸೆ<br>ಅಜ್ಜನಿಗೆ ಬೇಕು ಬೆಣ್ಣೆ ದೋಸೆ |  |
|  | ಚಿಣ್ಣರು ಚಿಣ್ಣಿದಾಂಡು ಆಡಿದರು.<br>ಅಣ್ಣನು ಹಣ್ಣನು ಹಂಚಿದನು. | |
|  | ದೂರದ ಬೆಟ್ಟ ಕಣ್ಣಿಗೆ ಚಂದ<br>ಹೆಣ್ಣಿನ ಅಂದಕೆ ಕುಂಕುಮ ಚಂದ. |  |
|  | ಅಂಚೆಯ ಅಣ್ಣ ಬಂದಿಹನು.<br>ಅಣ್ಣನ ಕಾಗದ ತಂದಿಹನು. | |
|  | ಹುಣ್ಣಿಮೆ ಚಂದಿರ ಬಂದಿಹನು.<br>ಹಾಲಿನ ಬಣ್ಣವ ಹರಡಿಹನು. | |

## 8. ಅಭ್ಯಾಸ ಪುಸ್ತಕ (ವಾಕ್ಯ ಸರಿಪಡಿಸಿ ಬರೆ) 95

ಸೂಚನೆ: ಅಭ್ಯಾಸ ಪುಸ್ತಕದಲ್ಲಿ ಮೆಟ್ಟಿಲು ಸಂಖ್ಯೆ 95ನ್ನು ಪೂರ್ಣಗೊಳಿಸುವುದು.

## 8. ಓದಿ ಉತ್ತರಿಸು 96

ಅಣ್ಣ–ತಂಗಿ

ಅಣ್ಣನು ಸಂತೆಗೆ ಹೋದನು. ಸಂತೆಯಿಂದ ಬಣ್ಣ ಬಣ್ಣದ ಬುಗುರಿ ತಂದನು. ಶಾಲೆಯ ಅಂಗಳದಿ ಚಿಣ್ಣರ ಜೊತೆಗೆ ಬುಗುರಿ ಆಟ ಆಡಿದನು. ಶಾಲೆಯ ತೋಟದಿ ಬಣ್ಣ ಬಣ್ಣದ ಚಿಟ್ಟೆಯ ನೋಡಿದನು. ಆಟ ಮುಗಿಸಿ ಮನೆಗೆ ಹೋಗಲು, ತಾಯಿ ಹಣ್ಣನು ಕೊಟ್ಟಳು. ಅಣ್ಣ–ತಂಗಿ ಒಟ್ಟಿಗೆ ಸೇರಿ ಹಣ್ಣನು ತಿಂದರು.

1.ಸಂತೆಗೆ ಹೋದವರು ಯಾರು?

ಉತ್ತರ:

2.ಅಣ್ಣನು ಶಾಲೆಯ ತೋಟದಲ್ಲಿ ಏನು ನೋಡಿದ?

ಉತ್ತರ:

## 8. ಅಭ್ಯಾಸ ಪುಸ್ತಕ (ಪದ ರಚನೆ) 97

ಸೂಚನೆ: ಅಭ್ಯಾಸ ಪುಸ್ತಕದಲ್ಲಿ ಮೆಟ್ಟಿಲು ಸಂಖ್ಯೆ 97ನ್ನು ಪೂರ್ಣಗೊಳಿಸುವುದು.

## 8. ತರತರದ ಹಣ್ಣುಗಳು (ವಾಚಕ) 98

ಕೋತಿಯು ಸವಿಯುವುದು ಯಾವ ಹಣ್ಣು?
ಹಳದಿಯ ಹಣ್ಣು
ಸುಲಿದು ಸವಿಯುವ ಈ ಹಣ್ಣು
ಸಿಹಿ ಸಿಹಿಯಾದ ಬಾಳೆಹಣ್ಣು

ಅಳಿಲು ಸವಿಯುವುದು ಯಾವ ಹಣ್ಣು?
ಹಸಿರು ಬಣ್ಣದ ಈ ಹಣ್ಣು
ಬಹಳ ಬೀಜದ ಈ ಹಣ್ಣು
ಬಿಳಿಯ ತಿರುಳಿನ ಸೀಬೆ ಹಣ್ಣು
ಕೆಂಪು ತಿರುಳಿನ ಸೀಬೆಹಣ್ಣು

ನವಿಲು ಸವಿಯುವುದು ಯಾವ ಹಣ್ಣು?
ಕಂದು ಬಣ್ಣದ ಈ ಹಣ್ಣು
ಅಗಲ ಬೀಜಗಳ ಈ ಹಣ್ಣು
ರಸ ಭರಿತ ಸಪೋಟ ಹಣ್ಣು

ಕಾಗೆಯು ಸವಿಯುವುದು ಯಾವ ಹಣ್ಣು?
ಕೇಸರಿ ಬಣ್ಣದ ಈ ಹಣ್ಣು
ಸದಾಕಾಲ ಸಿಗುವ ಈ ಹಣ್ಣು
ರುಚಿಕರವಾದ ಪರಂಗಿ ಹಣ್ಣು

ಗಿಳಿಯು ಸವಿಯುವುದು ಯಾವ ಹಣ್ಣು
ಹಸಿರು ಹಳದಿ ಕೂಡಿದ ಬಣ್ಣ
ಹಸಿರು ಹಳದಿಯ ಈ ಹಣ್ಣು
ಒಂದೇ ವಾಟೆಯ ಈ ಹಣ್ಣು
ತರ ತರ ಜಾತಿಯ ಮಾವಿನ ಹಣ್ಣು.

ಬಾವಲಿ ಸವಿಯುವುದು ಯಾವ ಹಣ್ಣು?
ಕೆಂಪು ಬಣ್ಣದ ಈ ಹಣ್ಣು
ಬಹಳ ಬೀಜದ ಈ ಹಣ್ಣು
ರುಚಿ ರುಚಿಯಾದ ದಾಳಿಂಬೆ ಹಣ್ಣು

# 8. ಸಣ್ಣ ಇರುವೆ ಚುರುಕು ಇರುವೆ (ವಾಚಕ) 99

ರಹೀಮ ತುಂಬಾ ಸೋಮಾರಿ ಹುಡುಗ. ಅವನು ಹೇಳಿದ ಕೆಲಸ ಎಂದೂ ಮಾಡನು. "ಅಂಗಡಿಗೆ ಹೋಗಿ ಬಾಳೆಹಣ್ಣು ತೆಗೆದುಕೊಂಡು ಬಾ"ಎಂದು ತಾಯಿ ಒಂದು ದಿನ ರಹೀಮನಿಗೆ ಹೇಳಿದಳು.

ತಾಯಿಯ ಮಾತು ಕೇಳದೆ ರಹೀಮ ಚಿಣ್ಣಿದಾಂಡು ಆಡಲು ಹೋದನು. ಆಡುವಾಗ ಚಿಣ್ಣಿಯು ಇರುವೆಗಳ ಗೂಡಿನ ಬಳಿ ಹಾರಿತು. ಚಿಣ್ಣಿ ಹುಡುಕಲು ಹೋದಾಗ ರಹೀಮನಿಗೆ ಇರುವೆಗಳ ಸಾಲು ಕಂಡಿತು.

ರಹೀಮನು ಕುತೂಹಲದಿಂದ ಇರುವೆಗಳ ಬಳಿ ಬಂದು ನಿಂತನು. ಅದರ ಪಾಡಿಗೆ ಅದು ಕೆಲಸ ಮಾಡುವುದ ನೋಡಿದನು. ಒಂದರ ಹಿಂದೆ ಒಂದು ಇರುವೆಗಳು ಸಾಲಾಗಿ ಹೋಗುವುದು ಕಂಡನು.

ರಹೀಮನು ಅವುಗಳ ಮೇಲೆ ಕೈ ಆಡಿಸಿದನು. ಗಾಳಿ ಊದಿದನು. ನೀರು ಹಾಕಿದನು. ಏನೂ ಮಾಡಿದರೂ ಇರುವೆಗಳು ಮರಳಿ ಸಾಲಿಗೆ ಬಂದವು. ಪುನಃ ಕೆಲಸ ಮಾಡಲು ಶುರುಮಾಡಿದವು.

" ನಾನು ಏನು ಮಾಡಿದರೂ ಇರುವೆಗಳಿಗೆ ಕೆಲಸದ ಮೇಲೆಯೇ ಗಮನವಿದೆ. ಈ ಇರುವೆಗಳಿಂದ ನಾನು ಕಲಿಯಬೇಕು. ಮೊದಲು ಕೆಲಸ ಮುಗಿಸಿ ನಂತರ ಆಡಬೇಕು" ಎಂದುಕೊಂಡನು. ಚಿಣ್ಣಿಯನು ಗೆಳೆಯರಿಗೆ ಕೊಟ್ಟು ಮನೆಗೆ ಓಡಿದನು.

ರಹೀಮ ತಾಯಿಯ ಬಳಿ ಬಂದನು. " ಇಂದು ನಾನು ಇರುವೆಗಳ ನೋಡಿ ಕಲಿತೆ. ನಾನು ಸೋಮಾರಿಯಾಗದೇ ನೀನು ಹೇಳಿದ ಕೆಲಸ ಮಾಡುವೆ" ಎಂದನು. ತಾಯಿಗೆ ರಹೀಮನ ಮಾತು ಕೇಳಿ ಸಂತೋಷವಾಯಿತು.